O.S. No.426/2014
PW.1

ದಿನಾಂಕ:**31.01.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲುಃ **6** ನೇ ಪ್ರತಿವಾದಿಯರ ಪರ ಶ್ರೀ.ಬಿ.ಆರ್**.** ವಕೀಲರಿಂದಃ**-**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎಲ್ಲಾ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆಸಿರುವ ಎಲ್ಲಾ ವಿಚಾರ ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 3 ನೇ ಪ್ಯಾರಾದಲ್ಲಿ 5 ನೇ ಪ್ರತಿವಾದಿ ಕರಿಯಪ್ಪ ಬಿನ್ ರಾಮಯ್ಯ ರವರ ತಮ್ಮ ಎಂದು ಹೇಳಿರುವ ವಿಚಾರ ಸರಿಯಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗಳೆಲ್ಲಾ ಸೇರಿ ಡಿ.ಎನ್.ಪ್ರಕಾಶ್ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ ನಾವು ದಾವೆ ಹೂಡಿದ ನಂತರ ಮಾರಾಟ ಮಾಡಿರುತ್ತಾರೆ. ಈ ದಾವೆಯನ್ನು ನಾನು ದಿಃ6-11-2014 ರಂದು ಹಾಕಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ದಾವಾ ಸ್ವತ್ತನ್ನು ಯಾವಾಗ ಮಾರಾಟ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ದಿಃ15-09-2014 ರಲ್ಲೇ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಹಾಕುವ ಕಾಲಕ್ಕೆ ಡಿ.ಎನ್.ಪ್ರಕಾಶ್ ಅವರ ಹೆಸರಿಗೆ ಖಾತೆ ಮತ್ತು ಪಹಣಿ ಆಗಿತ್ತು ಎಂದರೆ ಸರಿಯಲ್ಲ. ಖಾತೆ ಮತ್ತು ಪಹಣಿ ಯಾವಾಗ ಡಿ.ಎನ್.ಪ್ರಕಾಶ್ ಅವರ ಹೆಸರಿಗೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ಕರಿಯಪ್ಪ ಅವರಿಗೆ 4 ಜನ ಮಕ್ಕಳು, ಅವರೆಂದರೆ ಶೇಖರ, ಅಣ್ಣಪ್ಪ, ಗಣೇಶ ಇನ್ನೊಬ್ಬರ ಹೆಸರು ನನಗೆ ನೆನಪಿಲ್ಲ. ನಿಪಿ.1 ರ ದಾಖಲೆಗೆ ಯಾರ್ಯಾರು ಸಹಿ ಮಾಡಿರುತ್ತಾರೆ ಎಂದು ನೋಡಿದರೆ ಹೇಳುತ್ತೇನೆ. ಕರಿಯಪ್ಪ ಅವರಿಗೆ ಗಣೇಶ, ಗವಿಯ, ಶೇಖರ ಮತ್ತು ಅಣ್ಣಪ್ಪ ಎಂಬ 4 ಜನ ಗಂಡು ಮಕ್ಕಳು ಹಾಗೂ ಸುಂದರಿ ಮತ್ತು ಮಂಜರಿ ಎಂಬ ಇಬ್ಬರು ಹೆಣ್ಣುಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಗವಿಯ, ಸುಂದರಿ ಮತ್ತು ಮಂಜರಿ ಅವರಿಗೆ ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಶೇಖರ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಕಛೇರಿಯಲ್ಲಿ ಹೋಗಿ ಮರಣ ಪ್ರಮಾಣ ಪತ್ರ ಕೇಳಿರುತ್ತೇನೆ ಅವರು ಲಭ್ಯವಿಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ. ಶೇಖರ ಅವರು ಎಲ್ಲಿ ಯಾವಾಗ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಶೇಖರ ಅವರಿಗೆ ಮದುವೆಯಾಗಿತ್ತು ಎಂದರೆ ಸರಿ. ಅವರ ಶೇಖರ ಅವರ ಹೆಂಡತಿ

ಹೆಸರು ನನಗೆ ಗೊತ್ತಿಲ್ಲ. ಶೇಖರ ಅವರಿಗೆ ಎರಡು ಜನ ಮಕ್ಕಳು ಇದ್ದಾರೆ ಅವರ ಹೆಸರು ನನಗೆ ನೆನಪಿಲ್ಲ. ಶೇಖರ ಅವರ ಹೆಂಡತಿ ಹಾಗೂ ಎರಡು ಜನ ಮಕ್ಕಳಿಗೆ ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುತ್ತೇನೆ. ಶೇಖರ ಅವರ ಮಕ್ಕಳು ಎನ್.ಆರ್.ಪುರ ತಾಲ್ಲೂಕಿನ ರಾಊರು ಗ್ರಾಮದವರು. ನಾನು ರಾಊರು ಗ್ರಾಮಕ್ಕೆ ಯಾವತ್ತು ಹೋಗಿರುವುದಿಲ್ಲ. ರಾಊರು ಗ್ರಾಮ ಎನ್.ಆರ್.ಪುರ ಅಂಚೆಗೆ ಬರುತ್ತದೆ. ರಾಊರು ಗ್ರಾಮಕ್ಕೆ ರಾಊರು ಅಂಚೆ ಬರುತ್ತದೆ, ನಾನು ವಾದ ಪತ್ರದಲ್ಲಿ ಸರಿಯಾದ ವಿಳಾಸ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

ಕರಿಯಪ್ಪನ ಮಕ್ಕಳಲ್ಲಿ ಶೇಖರ ದೊಡ್ಡವರು. ನಂತರ ಅಣ್ಣಪ್ಪ, ನಂತರ ಗಣೇಶ ಇರಬಹುದು. ನಿಪಿ.1 ರಲ್ಲಿ ಕರಿಯಪ್ಪರವರ ವಯಸ್ಸನ್ನು ಅಂದಾಜಿನ ಮೇಲೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಕರಿಯಪ್ಪರ ಮಕ್ಕಳಲ್ಲಿ ಅಣ್ಣಪ್ಪ ದೊಡ್ಡವನು, ನಂತರ ಗಣೇಶ, ನಂತರ ಶೇಖರ ಎಂದರೆ ನನಗೆ ಗೊತ್ತಿಲ್ಲ. ಅಣ್ಣಪ್ಪರವರು ನಾನು ನೋಡಿರುವ ಹಾಗೆ ಆಟೋ ಚಾಲಕನಾಗಿದ್ದರು. ಗಣೇಶ ಗ್ರಾ.ಪಂ.ಸದಸ್ಯ ಎಂದರೆ ನನಗೆ ಗೊತ್ತಿಲ್ಲ.

ಬಾಯಮ್ಮ ಅವರು ಎಷ್ಟು ವರ್ಷ ವಯಸ್ಸಿನಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು 90 ವರ್ಷ ವಯಸ್ಸಿನಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಇರಬಹುದು. ನಾನು ವಕೀಲರ ಮೂಲಕ ಬಾಯಮ್ಮ ಅವರಿಗೆ ಕಳುಹಿಸಿದ ನೋಟೀಸಿನ ಅಂಚೆ ಸ್ವೀಕೃತಿ ಹಾಜರುಪಡಿಸಿರುತ್ತೇನೋ ಇಲ್ಲವೊ ನನಗೆ ಗೊತ್ತಾಗುತ್ತಿಲ್ಲ. ನನಗೆ ತೋರಿಸುತ್ತಿರುವ ಶೇಖರಪ್ಪ ಅವರಿಗೆ ಕಳುಹಿಸಿದ ನೋಟೀಸು/ನಿಪಿ.12 ರಲ್ಲಿ ರಾಊರು ಅಂಚೆ ಎಂದು ನಮೂದು ಇಲ್ಲ. ನಾನು ಬೇರೆಯವರಿಗೆ ನೋಟೀಸು ಕಳುಹಿಸಿದ ಬಗ್ಗೆ ಅಂಚೆ ಸ್ವೀಕೃತಿ ಅಥವಾ ಅಂಚೆ ಲಕೋಟೆ ಇಲ್ಲ ಎಂದರೆ ಸರಿಯಲ್ಲ.

ಉಮೇಶನಾಯ್ಕ ಮತ್ತು ಭೀಮಾನಾಯ್ಕ ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ.12 ಜಿ ಮತ್ತು ನಿಪಿ.12 ಎಫ್ ಯಾರಿಗೆ ಸಂಬಂದಪಟ್ಟ ದಾಖಲೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.12 ರಲ್ಲಿ ನಮೂದಿಸಿರುವ ದಿನಾಂಕ ಯಾವುದು ಎಂದು ಗೊತ್ತಾಗುತ್ತಿಲ್ಲ. ಶೇಖರಪ್ಪ, ಅಣ್ಣಪ್ಪ, ಗಣೇಶ ಇವರು ಈಗ ರಾಊರಿನಲ್ಲಿ ವಾಸ ಮಾಡುತ್ತಿದ್ದಾರೆ ಎಷ್ಟು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.12 ರಲ್ಲಿ

ಎಲ್ಲರೂ ಟಿ.ಬಿ.ಕಾವಲು ಗ್ರಾಮ, ಸಖರಾಯಪಟ್ಟಣ ಹೋಬಳಿ, ಕಡೂರು ತಾಲ್ಲೂಕು ಎಂದು ನಮೂದು ಮಾಡಿರುತ್ತೇವೆ. ನಾನು ಪ್ರತಿವಾದಿಗಳ ಸರಿಯಾದ ವಿಳಾಸ ನಮೂದು ಮಾಡದೇ ನೋಟೀಸು ಕಳುಹಿಸಿ ನ್ಯಾಯಾಲಯದ ಮುಂದೆ ಸತ್ಯವನ್ನು ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.12 ರ ನೋಟೀಸು 2024 ರಲ್ಲಿ ಸೃಷ್ಟಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬಾಬಯ್ಯ ಕರಿಯಪ್ಪ ಅವರ ಸಹೋದರ ಎಂದು ನಮೂದು ಮಾಡಿ ಈಗ ಸರಿಯಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಹೆಬ್ಬೆಟ್ಟಿನ ಗುರುತುಗಳನ್ನು ಗುರುತಿಸಿದವರು ಯಾರು ಎಂದು ನನಗೆ ನೆನಪಿಲ್ಲ. ಶೇಖರ ಅವರು ಎಲ್ಲಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಶೇಖರ ಅವರು ಹೆಬ್ಬೆಟ್ಟು ಹಾಕುತ್ತಿರಲಿಲ್ಲ ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ತಪಟಾಯಿಸುವ ಉದ್ದೇಶದಿಂದ ನಿಪಿ.1 ರ ದಾಖಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ.1 ರ ದಾಖಲೆಯನ್ನು ದಿಃ04.07.2014 ರಲ್ಲಿ ಬರೆದಿರುತ್ತಾರೆ. ಸಮಯ ನೆನಪಿಲ್ಲ. ಮದ್ಯಾಹ್ನದ ನಂತರ ಬರೆದಿರಬಹುದು. ನಿಪಿ.1 ರ ಸ್ಟ್ಯಾಂಪ್ ಪೇಪರನ್ನು ನಾನೇ ಕಡೂರಿನಲ್ಲೇ ಖರೀದಿಸಿರುತ್ತೇನೆ. ಯಾವ ದಿನಾಂಕ ತೆಗೆದಿರುತ್ತೇನೆ ಎಂದು ಈಗ ನೆನಪಿಲ್ಲ. ನಿಪಿ.1 ರ ದಾಖಲೆ ತಯಾರಿಸುವಾಗ 1 ರಿಂದ 4 ನೇ ಪ್ರತಿವಾದಿಗಳು ಹಾಜರಿದ್ದರು ಮತ್ತು ವಸಂತಕುಮಾರ ಮತ್ತು ಇನ್ನೊಬ್ಬರು ಹಾಜರಿದ್ದರು. ಇನೊಬ್ಬರ ಹೆಸರು ಈಗ ನೆನಪಿಲ್ಲ. ವಸಂತಕುಮಾರ್ ನನ್ನ ಸಂಬಂಧಿಕರು ಅವರು ಸಿಂಗಟಗೆರೆಯ ಪಕ್ಕದ ಹಳ್ಳಿಯವರು. ನಿಪಿ.1 ರಲ್ಲಿ ಬರೆದ ವಿಚಾರಗಳನ್ನು ನಾನೇ ಹೇಳಿರುತ್ತೇನೆ. ನಿಪಿ.2 ರ ದಾಖಲೆಯನ್ನು ನನ್ನ ತಂದೆ ತಯಾರಿಸಿರುತ್ತಾರೆ ಅದರಲ್ಲಿ ನಾನು ಪಕ್ಷಗಾರನಲ್ಲ. ನಿಪಿ.2 ರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ನಿಪಿ.1 ಮತ್ತು 2 ರ ಪ್ರಕಾರ ನಾನು ಕರಿಯಪ್ಪ ಮತ್ತು ಅವರ ಮಕ್ಕಳಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿ.

ನನ್ನ ತಂದೆ ಯಾವಾಗ ಮೃತಪಟ್ಟಿರುತ್ತಾರೆ ಎಂದು ನೆನಪಿಲ್ಲ. ದಿಃ04.07.2014 ರ ಮುಂಚೆ ನನ್ನ ತಂದೆ ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ತಂದೆ ಮೃತಪಟ್ಟ

ಕಾರಣಕ್ಕೆ ನಾನು ನನ್ನ ಹೆಸರಿಗೆ ನಿಪಿ.1 ರ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರ ದಾಖಲೆ ತಯಾರಿಸುವ ಕಾಲಕ್ಕೆ 1 ರಿಂದ 4 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಮಾಲೀಕರು ಆಗಿರಲಿಲ್ಲ ಹಾಗೂ ಅವರ ಹೆಸರಿನಲ್ಲಿ ಖಾತೆಯೂ ಇರಲಿಲ್ಲ ಎಂದರೆ ಸರಿ. 2014 ರಲ್ಲಿ ಕರಿಯಪ್ಪ ಅವರ ಹೆಸರಿನಿಂದ 5 ನೇ ಪ್ರತಿವಾದಿ ಮತ್ತು ಅವರ ತಂದೆ ಹೆಸರಿಗೆ ಖಾತೆ ಬದಲಾವಣೆ ಆಗಿತ್ತು ಎಂದರೆ ಸರಿ. ನಿಪಿ.1 ರಲ್ಲಿ ಮತ್ತು 2 ರಲ್ಲಿ ಯಾವ ಉದ್ದೇಶಕ್ಕಾಗಿ ಸ್ವತ್ತನ್ನು ಮಾರಾಟ ಮಾಡಲಾಗಿದೆ ಎಂದು ನಮೂದು ಇರುತ್ತದೆ ಎಂದು ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ಗ್ರಾಮಠಾಣಾ ವ್ಯಾಪ್ತಿಗೆ ಸೇರಿಲ್ಲ. ನಿಪಿ.1 ರ 3 ನೇ ಪುಟದಲ್ಲಿ ಗ್ರಾಮ ಠಾಣೆಗೆ ಸೇರಿದ ಖುಷ್ಕಿ ಜಮೀನು ಎಂದು ನಮೂದು ಇದೆ ಎಂದರೆ ಸರಿ. ನಿಪಿ.1 ಕ್ಕೆ ಯಾರ್ಯಾರು ಯಾವ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ ಎಂದು ನೋಡಿ ಹೇಳಬಹುದು. ನಿಪಿ.1 ರ ದಾಖಲೆಗೆ ಬಾಯಮ್ಮ ಅವರ ಹೆಬ್ಬೆಟ್ಟಿನ ಗುರುತು ಇದೆ. ನಿಪಿ.1 ನ್ನು ಯಾರು ಬರೆದಿರುತ್ತಾರೆ ಎಂದು ನೆನಪಿಲ್ಲ, ಸುದರ್ಶನ್ ಅವರು ಬರೆದಿರಬಹುದು. ದಿಃ04.07.2014 ರ 3 ತಿಂಗಳ ಮುಂಚೆ 1 ರಿಂದ 4 ನೇ ಪ್ರತಿವಾದಿಗಳನ್ನು ಬೇಟಿ ಮಾಡಿದ್ದೆ. ನಿಪಿ.1 ರ ಪತ್ರವನ್ನು 1 ತಿಂಗಳ ಮುಂಚೆ ಖರೀದಿ ಮಾಡಿರುವುದಿಲ್ಲ. ನಿಪಿ.2 ರ ಶೆಡ್ಯೂಲ್ ನಲ್ಲಿ ತಿದ್ದುಪಡಿ ಮಾಡಿದ ನಂತರ ಪಕ್ಷಗಾರರ ಸಹಿ ಪಡೆದಿಲ್ಲ ಎಂದರೆ ಸರಿ. ದಾವಾ ಸ್ವತ್ತನ್ನು ಪ್ರಕಾಶ್ ಅವರು ಖರೀದಿ ಮಾಡಿದ ನಂತರ ತಂತಿಬೇಲಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಕಡೂರಿನ ನ್ಯಾಯಾಲಯದಲ್ಲಿ ನಾನು ಸ್ವಾಧೀನ ನೀಡಿರುವುದಿಲ್ಲ ಎಂದು ದಾವೆ ಸಲ್ಲಿಸಿರುತ್ತಾರೆ. ಇದರ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಬಾಬಯ್ಯ ಅವರು ಸದರಿ ದಾವೆಯನ್ನು ವಜಾ ಮಾಡಿಸಿಕೊಂಡಿರುತ್ತಾರೆ. ಸದರಿ ದಾಖಲೆ ಈಗ ನ್ಯಾಯಾಲದ ಮುಂದೆ ಇದೆಯೋ ಇಲ್ಲವೋ ಗೊತ್ತಿಲ್ಲ ನಾನು ಹಾಜರುಪಡಿಸುತ್ತೇನೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ವಕೀಲರು ನೋಡಿ ಹಾಜರುಪಡಿಸಿರುತ್ತಾರೆ. ನನ್ನ ವಕೀಲರು ಅದರಲ್ಲಿರುವ ವಿಚಾರಗಳನ್ನು ತಿಳಿಸಿರುತ್ತಾರೆ, ಆದರೆ ಈಗ ನನಗೆ ನೆನಪಿಲ್ಲ. ನಿಪಿ.12 ರ ವಿಚಾರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ನೊಂದಣಿ ಮಾಡಿಸಿಕೊಳ್ಳಲು ಸಿದ್ದನಿದ್ದೇನೆ ಎಂದು ಹೇಳಿರುತ್ತೇನೆ. ನಿಪಿ.12 ರಲ್ಲಿ ನಾನು ದಾವಾ ಸ್ವತ್ತನ್ನು ನೊಂದಣಿ

ಮಾಡಿಸಿಕೊಳ್ಳಲು ಸಿದ್ದನಿದ್ದೇನೆ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ 1 ರಿಂದ 4ನೇ ಪ್ರತಿವಾದಿಗಳಾಗಲೀ ಅಥವಾ ಕರಿಯಪ್ಪ ಆಗಲೀ ನನ್ನ ತಂದೆಯವರಿಗೆ ಅಥವಾ ನನಗೆ ಯಾವುದೇ ದಾಖಲಾತಿಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿದ್ದರು ಎಂದರೆ ಸರಿ. ನನ್ನ ತಂದೆ ರಾಯಕಾರಣಿಯಾಗಿದ್ದರಿಂದ ಯಾರ ಯಾರ ಹೆಸರಿಗೆ ಯಾವ ಜಮೀನು ಇದೆ ಮತ್ತು ಯಾವ ಯಾವ ಊರಿನಲ್ಲಿ ಯಾರ್ಯಾರು ವಾಸ ಇದ್ದಾರೆ ಎಂಬ ಬಗ್ಗೆ ಅವರಿಗೆ ಮಾಹಿತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಮಾಹಿತಿ ಇದ್ದ ಕಾರಣ ಎಲ್ಲಿಂದಲೋ ನಿಪಿ.1 ಮತ್ತು 2 ರ ಪತ್ರವನ್ನು ತಂದು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಎರಡು ಬೋರ್ ಗಳು ಇದ್ದು ಅದಕ್ಕೆ ಕೆ.ಇ.ಬಿ. ಸಂಪರ್ಕ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಈಗ ಶುಂಟಿ ಬೆಳೆ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನಾಗಲೀ ನನ್ನ ತಂದೆಯಾಗಲಿ ಯಾವತ್ತೂ ಸಹ ದಾವಾ ಸ್ವತ್ತಿನ ಸ್ವಾದೀನ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ಮತ್ತು 2 ರ ಮೇಲೆ ಇರುವ ಸಹಿಗಳು ಪ್ರತಿವಾದಿಗಳಿಗೆ ಸಂಬಂಧಪಟ್ಟಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಇರುವ ಸಹಿ ಕರಿಯಪ್ಪ ಅವರಿಗೆ ಸೇರಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

Sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.